# ಮಧ್ಯಪ್ರದೇಶದ ಹನುವಾಂಟಿ: ರಜಾ ಮೋಜಿನ ತಾಣ

ಹನುವಾಂಟಿಯಾ ಮಧ್ಯಪ್ರದೇಶದ ಪ್ರಮುಖ ಪ್ರವಾಸಿ ಆಕರ್ಷಣೆಗಳಲ್ಲೊಂದು. ಸಾಹಸಪ್ರಿಯರ ಮೋಜಿಗೆ ಹಲವು ಬಗೆಯ ಚಟುವಟಿಕೆಗಳನ್ನು ಕಲ್ಪಿಸಿರುವ ಈ ದ್ವೀಪ, ವನ್ಯಜೀವಿಗಳ ಆಗರವೂ ಹೌದು. ವರ್ಷದ ಎಲ್ಲ ಕಾಲದಲ್ಲೂ ಭೇಟಿ ನೀಡಬಹುದಾದ ಪ್ರವಾಸಿ ತಾಣ ಈ ಹನುವಾಂಟಿಯಾ.

■ ಸುಬ್ಬರಾವ್ ಎನ್.ಕೆ.




ದೇಶದ ಹೃದಯ ಭಾಗದಲ್ಲಿರುವ ಮಧ್ಯಪ್ರದೇಶ ಎರಡನೆಯ ದೊಡ್ಡ ರಾಜ್ಯ. ಸಮೃದ್ಧ ಇತಿಹಾಸ, ಪ್ರಾಕೃತಿಕ ಸೌಂದರ್ಯ, ವಿಭಿನ್ನ ಸಂಸ್ಕೃತಿ, ಸಂಪ್ರದಾಯಗಳ ವಿಶೇಷತೆಯಿಂದಾಗಿ ಪ್ರವಾಸಿಗರಿಗೆ ಆಕರ್ಷಣೀಯವೂ ಹೌದು. ರಾಜಧಾನಿ ಭೋಪಾಲ್ ನಗರವು 'ಕೆರೆಗಳ ನಗರ' ಎಂದು ಪ್ರಸಿದ್ಧವಾಗಿದೆ.

ಮಧ್ಯಪ್ರದೇಶ ತನ್ನ ಒಡಲಲ್ಲಿ ಐತಿಹಾಸಿಕ ಕೋಟೆಗಳನ್ನು, ಯಾತ್ರಾಕ್ಷೇತ್ರಗಳನ್ನು, ರಾಷ್ಟ್ರೀಯ ಉದ್ಯಾನವನಗಳನ್ನು ಹೊಂದಿದ್ದು, ವರ್ಷಪೂರ್ತಿ ಪ್ರವಾಸಿಗರನ್ನು ಸೆಳೆಯುತ್ತಿದೆ. ಈ ರಾಜ್ಯದ ಪ್ರವಾಸ ಒಂದರ್ಥದಲ್ಲಿ 'ಭಾರತ ದರ್ಶನ' ಎಂದರೂ ತಪ್ಪಾಗಲಾರದು. ಪ್ರಾಕೃತಿಕ ವೈವಿಧ್ಯದ ಜೊತೆಗೆ, ದೇಶದ ಎಲ್ಲ ಭಾಗಗಳಿಂದಲೂ ಇಲ್ಲಿಗೆ ತಲುಪಲು ಅನುಕೂಲಗಳಿವೆ.

ನರ್ಮದಾ ಮತ್ತು ತಪ್ತಿ ಇಲ್ಲಿನ ಎರಡು ಪ್ರಮುಖ ನದಿಗಳು. ಇವು ಒಂದಕ್ಕೊಂದು ಸಮಾನಾಂತರವಾಗಿ ವಿಂಧ್ಯ ಹಾಗು ಸಾತ್ಪುರಾ ಪರ್ವತ ಶ್ರೇಣಿಗಳ ಮಧ್ಯಭಾಗದಲ್ಲಿ ಹರಿಯುತ್ತವೆ. ಸಸ್ಯ, ಪ್ರಾಣಿ ಸಂಪತ್ತು, ಅದ್ಭುತವಾದ ಪ್ರಕೃತಿ ಸೌಂದರ್ಯ ಇಲ್ಲಿನ ಪ್ರವಾಸೋದ್ಯಮಕ್ಕೆ ಹೆಚ್ಚಿನ ಮೆರುಗನ್ನು ನೀಡುತ್ತದೆ.

ಪ್ರಾಚೀನ ಕಾಲದಿಂದಲೂ ಸುಮಾರು ಹದಿನಾಲ್ಕು ವಂಶಗಳ ರಾಜರುಗಳ ಏಳುಬೀಳುಗಳನ್ನು ಈ ರಾಜ್ಯವು ಕಂಡಿದೆ. ಆದ್ದರಿಂದ ಸ್ವಾಭಾವಿಕವಾಗಿ ಇಲ್ಲಿ ಹಲವು ರೂಪಗಳ ವಾಸ್ತುಶಿಲ್ಪದ ಶೈಲಿಗಳನ್ನು